2

# ಕ್ರಿಸ್ತನಲ್ಲಿ ನೂತನ ಜನಾಂಗ

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2 ಕೊರಿಂಥ 5:17).*

ನೂತನೆಯನ್ನು ಪ್ರತಿಯೊಬ್ಬರೂ ಆನಂದಿಸುತ್ತಾರೆ. ಅದು ಒಂದು ಹೊಸ ಶಿಶು ವಾಗಿರಬಹುದು, ಒಂದು ಹೊಸ ಕಾರ್ ಆಗಿರಬಹುದು, ಇಲ್ಲವೇ ಕೇವಲ ಒಂದು ಹೊಸ ಕಾಲಚೀಲವಾಗಿರಬಹುದು, ನಾವು ಯಾವಾಗಲೂ ಹೊಸದಾಗಿರುವಂಥದ್ದರ ಹೊಸತನದಿಂದಲೂ ಅವಶ್ಯಕತೆಯಿಂದಲೂ ಚಕಿತಗೊಳ್ಳುತ್ತೇವೆ.

ಗ್ರೀಕ ಭಾಷೆಯಲ್ಲಿ ಎರಡು ಪದಗಳಿದ್ದು ಇಂಗ್ಲೀಷಿನ "ಹೊಸ" (new) ಎಂಬ ಪದದಿಂದ ಭಾಷಾಂತರಿಸಲ್ಪಟ್ಟಿದೆ. ಪದಗಳಲ್ಲಿ ಒಂದು, *neos*, ಅದರ ಅರ್ಥ "ಸಮಯದಲ್ಲಿ ಹೊಸದು" ಎಂದಾಗುತ್ತದೆ. ಈ ಪದವನ್ನು ಉಪಯೋಗಿಸಿ, ಹೊಸದಾಗಿ ಹುಟ್ಟಿದ ಶಿಶುವಿಗೆ, "ಅವನು ಹೊಸ ಮಾನವ ಜೀವಿ" ಎಂದು ಹೇಳಬಹುದು. ಹೊಸದಾಗಿ ಕಟ್ಟಲ್ಪಟ್ಟು, ಇನ್ನೂ ಯಾರೂ ವಾಸಿಸದೇ ಇರುವ ಒಂದು ಮನೆಗೆ "ಇದು ಒಂದು ಹೊಸಮನೆ" ಎಂದು ಹೇಳುತ್ತೇವೆ. ಶಿಶುವು ಮತ್ತು ಮನೆಯು ನಿಜವಾಗಿಯೂ "ಸಮಯದಲ್ಲಿ ಹೊಸದಾಗಿ" ಇರುತ್ತವೆ. ಅವು ಬಹಳಹಿಂದೆ ಅಸ್ತಿತ್ವದಲ್ಲಿರಲಿಲ್ಲ.

ಇನ್ನೊಂದು ಗ್ರೀಕ ಪದವು, *kainos,* ಮೂಲವಾಗಿ "ಗುಣದಲ್ಲಿ ಹೊಸದು" ಎಂದರ್ಥ ಕೊಡುತ್ತದೆ. ಅವರೊಂದಿಗೆ, ನಾವು ನವೀಕರಿಸಲ್ಪಟ್ಟ ಹಳೆ ಮನೆಗೆ "ಇದು ಒಂದು ಹೊಸ ಮನೆ" ಎಂದು ಹೇಳಬಹುದು. ಹಳೆ ಕಾರಿಗೆ ಹೊಸ ಮೋಟ ರನ್ನು ಕೂಡ್ರಿಸಿದಾಗ, ಅದಕ್ಕೆ ಹೊಸ ಜೋಡಿ ಟೈರುಗಳನ್ನು ಹಾಕಿದಾಗ, ಮತ್ತು ಅದಕ್ಕೆ ಪೇಂಟ್ ಮಾಡಿದಾಗ, "ಇದು ಒಂದು ಹೊಸಕಾರು" ಎಂದು ಹೇಳಬಹುದು. ಮನೆ ಮತ್ತು ಕಾರು "ಸಮಯದಲ್ಲಿ ಹೊಸದಾದವುಗಳು" ಆಗಿರುವದಿಲ್ಲ, ಆದರೆ "ಗುಣದಲ್ಲಿ ಹೊಸದಾಗಿರುತ್ತವೆ." ಅವುಗಳಿಗೆ ಹೊಸ ಜೀವಕೊಡಲ್ಪಟ್ಟಿದೆ. ಅವು ಪುನಃ ಮಾಡಲ್ಪಟ್ಟಿರುತ್ತವೆ.

ಎರಡನೆಯ ಪದ, *kainos,* ಎಂಬುದು ಪೌಲನಿಂದ 2 ಕೊರಿಂಥ 5:17ರಲ್ಲಿ ಉಪಯೋಗಿಸಲ್ಪಟ್ಟಿದೆ. ನಿಜವಾಗಿಯೂ, ಈ ವಾಕ್ಯವನ್ನು ಹೀಗೆ ಭಾಷಾಂತರಿಸಬಹುದು. "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ, ಅವನು ಹೊಸ - ಗುಣಮಟ್ಟದಲ್ಲಿ ವ್ಯಕ್ತಿಯಾಗುವನು; ಪೂರ್ವಸ್ಥಿತಿಯು ದಾಟಿಹೋಯಿತು; ಇಗೋ, ಈ ಹೊಸ - ಗುಣಮಟ್ಟದ ಸಂಗತಿಗಳು ಬಂದಿರುವವು." ನಾವು ಸಮಯದಲ್ಲಿ ಪುನಃ ಪ್ರಾರಂಭಿಸಬೇಕೆಂದು ಪೌಲನು ಹೇಳುತ್ತಿರುವದಿಲ್ಲ, ಆದರೆ ನಾವು ಗುಣಮಟ್ಟದಲ್ಲಿ ಪ್ರಾರಂಭಿಸಬಹುದು ಎಂಬುದನ್ನು ಅವನು ಪ್ರಕಟಿಸುತ್ತಿದ್ದನು. ನಾವು ವ್ಯಯಮಾಡಿದ ಸಮಯವನ್ನು ಪುನಃ ಕೂಡಿಸಿಕೊಳ್ಳಬೇಕೆಂಬ ನಮ್ಮ ಅಪೇಕ್ಷೆಗೆ ಅವನು ಧ್ವನಿ

ಗೂಡಿಸುತ್ತಿರುವದಿಲ್ಲ, ಎಲಿಜಬೇತ್ ಆಕರ್ಸ್ ಅಲ್ಲೆನ್ ಹೀಗೆ ಹೇಳಿದ್ದಾರೆ:

ಹಿಂದಕ್ಕೆ, ಹಿಂದಕ್ಕೆ ತಿರುಗು,
ಓ ಸಮಯವೇ, ನಿನ್ನ ಓಟದಲ್ಲಿ,
ಇಂದಿನ ರಾತ್ರಿಗಾಗಿ ಮಾತ್ರವೇ
ನನ್ನನ್ನು ಪುನಃ ಮಗುವನ್ನಾಗಿ ಮಾಡು!

"ನಿನ್ನ ಜೀವಿತವು ಏನೇ ಆಗಿದ್ದಿರ ಬಹುದು, ಅದನ್ನು ಹೊಸದನ್ನಾಗಿ ಮಾಡಬಹುದು. ನೀನು ಸೋತವನಾಗಿದ್ದರೆ, ನೀನು ಜಯಶಾಲಿಯಾಗಬಹುದು. ನೀನು ಆತ್ಮಿಕವಾಗಿ ಸತ್ತುಹೋದವನಾಗಿದ್ದರೆ, ನೀನು ಸಜೀವಿಯಾಗಿ ಮಾಡಲ್ಪಡಬಹುದು" ಎಂದು ಪೌಲನು ಹೇಳುತ್ತಿರುವನು.

ಸಭೆಯು ಕ್ರಿಸ್ತನ ಮುಖಾಂತರ ಹೊಸದಾಗಿ ಮಾಡಲ್ಪಟ್ಟ ಜನರ ದೇಹವಾಗಿದೆ. ಅವರು ಪಾಪದಲ್ಲಿ ಸತ್ತುಹೋದವರು ಆದರೆ ಸುವಾರ್ತೆಯಿಂದ ಜೀವಿಸುವವರಾಗಿ ಮಾಡಲ್ಪಟ್ಟವರಾಗಿದ್ದಾರೆ. "ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಿಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿದ್ದಾನೆ" (ಕೊಲೊಸ್ಸೆ 2:13, 14) ಎಂದು ಪೌಲನು ಕೊಲೊಸ್ಸೆಯಲ್ಲಿಯ ಸಭೆಗೆ ಹೇಳಿದನು. ಕ್ರೈಸ್ತರಿಗೆ ಹೊಸ ಜೀವವು ಕೊಡಲ್ಪಟ್ಟಿದ್ದರೂ, ಅವರು, ಪಾಪದಿಂದ ಹೊಸ ಜೀವವು ಕದಿಯಲ್ಪಡದಂತೆ, ಈ ಹೊಸ ಜೀವನದಲ್ಲಿ ಜಾಗರೂಕತೆಯಿಂದ ಇರತಕ್ಕದ್ದು. "ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದು ಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂಥದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ" (ಎಫೆಸ 4:22-24) ಎಂದು ಪೌಲನು ಎಫೆಸದವರಿಗೆ ಬೋಧಿಸಿದನು.

ದೇವರು ಕೊಡುವ ಈ ಹೊಸ ಗುಣಮಟ್ಟದ ಜೀವಿತದ ಬಗ್ಗೆ ಇದು ಒಂದು ಯೋಗ್ಯ ಪ್ರಶ್ನೆಯಾಗಿದೆ: "ದೇವರು ಅದನ್ನು ಹೇಗೆ ಕೊಡುವನು?" ಇಲ್ಲವೇ, ಅದನ್ನು ಇನ್ನೊಂದು ರೀತಿಯಲ್ಲಿ ಕೇಳಬಹುದು, "ಕ್ರಿಸ್ತನಲ್ಲಿ ನಮ್ಮನ್ನು ನೂತನ ಜೀವಿಗಳನ್ನಾಗಿ ಮಾಡಲು ದೇವರು ಯಾವ ವಿಧಾನ ಉಪಯೋಗಿಸಿದನು?" ಈ ಪ್ರಶ್ನೆಯು ರೋ ಮಾಪುರ 6ರಲ್ಲಿ ಪೌಲನಿಂದ ಉತ್ತರಿಸಲ್ಪಟ್ಟಿದೆ.

ರೋಮಾಪುರ 1-3ರಲ್ಲಿ, ಜನರು ಹೇಗೆ ರಕ್ಷಿಸಲ್ಪಡುತ್ತಾರೆ ಇಲ್ಲವೇ ವಿಧೇಯ ನಂಬಿಕೆಯಿಂದ ದೇವರ ಎದುರಿನಲ್ಲಿ ನೀತಿವಂತರಾಗಿ ಮಾಡಲ್ಪಟ್ಟಿದ್ದಾರೆ ಎಂಬುದನ್ನು ಪೌಲನು ವರ್ಣಿಸಿದ್ದಾನೆ. ರೋಮಾಪುರ 4ರಲ್ಲಿ ಮನುಷ್ಯನನ್ನು, ಅಬ್ರಹಾಮನನ್ನು, ದೇವರ ಮುಂದೆ ನೀತಿವಂತನನ್ನಾಗಿ ಮಾಡಿದ ನಂಬಿಕೆಯ ಒಂದು ಉದಾಹರಣೆಯನ್ನು ಅವನು ಕೊಟ್ಟನು. ಆ ಮೇಲೆ, ರೋಮಪುರ 5-8ರಲ್ಲಿ ಪೌಲನು, ರಕ್ಷಣೆಯಿಂದ ಕೂಡಿ ಬರುವ ಆಶೀರ್ವಾದಗಳನ್ನು ವಿವರಿಸಿದನು: ದೇವರೊಂದಿಗೆ ನಮಗೆ ಸಮಾಧಾನವಿರುವುದು (5); ನಾವು ಕ್ಷಮಿಸಲ್ಪಟ್ಟಿರುವೆವು (6); ನಾವು ವಿಧೇಯ ವಿಶ್ವಾಸದ ಅಧೀನತೆಯಲ್ಲಿ ಇರುವೆವು, ಮೋಶೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿ ಅಲ್ಲ (7); ಮತ್ತು ನಮಗೆ ಜೀವವಿರುವುದು (8).

ರೋಮಾಪುರ 6ರಲ್ಲಿ, ಕ್ರಿಸ್ತನ ಮುಖಾಂತರವಾಗಿ ಪಾಪದಿಂದ ನಮ್ಮ ಸ್ವಾತಂತ್ರ್ಯವನ್ನು ಪೌಲನು ವಿವರಿಸಿದಂತೆ, ಅವನು ನಮ್ಮನ್ನು ದೇವರು ನೂತನ ಜನಾಂಗವಾಗಿ ಮಾಡಿದ್ದಾನೆ ಎಂಬುದನ್ನು ವಿವರಿಸಿದ್ದಾನೆ. ನನ್ನೊಂದಿಗೆ ರೋಮಾಪುರ 6ಕ್ಕೆ ಬನ್ನಿರಿ, ಮತ್ತು ನಮ್ಮ ದೇವರು ಕ್ರಿಸ್ತನಲ್ಲಿ ನೂತನ ವ್ಯಕ್ತಿಗಳನ್ನಾಗಿ ಹೇಗೆ ಮಾಡುವನು ಎಂಬುದನ್ನು ನೋಡೋಣ. ಪೌಲನು ಮುಂದಿಡಲ್ಪಟ್ಟಂತೆ, ವಿಧಾನವನ್ನು ಹಂತಗಳಲ್ಲಿ ವಿಭಾಗಿಸಬಹುದು. ಪತಂಗಹುಳದ ಬೆಳವಣಿಗೆಯಲ್ಲಿ ವಿಜ್ಞಾನಿಗಳು ಮೂರು ಭಿನ್ನವಾದ ಹಂತಗಳನ್ನು ಗುರುತಿಸಿರುವರು: ಮೊಟ್ಟೆಯ ಹಂತ, ಮರಿಹುಳದ ಹಂತ, ಮತ್ತು ಪತಂಗಹುಳದ ಹಂತ. ಅದೇ ರೀತಿಯಲ್ಲಿ, ಕ್ರಿಸ್ತನ ಮುಖಾಂತರ ನೂತನ ಜನಾಂಗ ವಾಗಿ ನಾನು ಆಗುವದರಲ್ಲಿ, ಮೂರು ಹಂತಗಳನ್ನು ಗುರುತಿಸಬಹುದು. ಈ ಮೂರು ಹಂತಗಳಲ್ಲಿ ಯಾವುದಾದರೂ ತಪ್ಪಿಹೋದರೆ ಪ್ರಗತಿಯು ಬಿದ್ದು ಹೋಗುವುದು. ನೀವು ಕ್ರಿಸ್ತನಲ್ಲಿ ನೂತನ ವ್ಯಕ್ತಿಯಾಗ ಬಹುದು; ಆದರೆ ನೀವು ಪರಿಪೂರ್ಣರಾಗುವದಕ್ಕಾಗಿ ದೇವರು ಪುನಃ ರಚಿಸುವ ವಿಧಾನಕ್ಕೆ ನಮ್ಮನ್ನು ಒಪ್ಪಿಸಿಕೊಡತಕ್ಕದ್ದು.

ದೇವರು ಒಬ್ಬ ನೂತನ ವ್ಯಕ್ತಿಯನ್ನು ಹೇಗೆ ಮಾಡುವನು?

## ಹಂತ ಒಂದು: ಬೇರ್ಪಡಿಸುವಿಕೆ

ನೂತನ ಜೀವಿತಕ್ಕೆ ಪ್ರಯಾಣದಲ್ಲಿ ಮೊದಲನೆಯ ಹಂತವು ಬೇರ್ಪಡಿಸುವಿಕೆಯ ಹಂತವಾಗಿದೆ. ದೇವರು ಪುನಃ ರಚಿಸುವಿಕೆಗೆ ಪಾಪದಿಂದ ಬೇರ್ಪಡಿಸುವಿಕೆಯಾಗಿದೆ.

"ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ?" (ರೋಮಾಪುರ 6:1, 2) ಎಂದು ಪೌಲನು ಬರೆದನು. "ಪಾಪದ ಪಾಲಿಗೆ ಸತ್ತವರು" ಎಂಬ ಮಾತುಗಳನ್ನು ಜಾಗರೂಕತೆಯಿಂದ ಗಮನಿಸಿರಿ. ಹಿಂದಿನ ಅಧ್ಯಾಯದಲ್ಲಿ, ರೋಮಾಪುರ 5ರಲ್ಲಿ, ಪೌಲನು ದೇವರ ಕೃಪೆಯನ್ನು ಒತ್ತಿ ಹೇಳಿದನು. ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು ಎಂದು ಅವನು ತೋರಿಸಿದ್ದನು (ವಚನಗಳು 20, 21). "ದೇವರು," ತನ್ನ "ಕೃಪೆಯಿಂದ ನಮ್ಮ ಪಾಪದ ಸಮಸ್ಯೆಯನ್ನು ಜಯಿಸಿದನು, ಮತ್ತು ಈ ಸಾಧನದಿಂದ ಆತನು ನಿಜವಾಗಿಯೂ ಎಷ್ಟು ದೊಡ್ಡವನಾಗಿದ್ದಾನೆ ಎಂಬುದನ್ನು ತೋರಿಸಿದನು" ಎಂದು ಹೇಳಿದನು. ಈ ಸತ್ಯವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಲು ಸಾಧ್ಯತೆಯಿದೆ. ಉದಾಹರಣೆಯಾಗಿ, ಒಬ್ಬನು, "ಕೃಪೆಯು ಹೆಚ್ಚಾಗುವಂತೆ ನಾವು ಪಾಪದಲ್ಲಿ ಮುಂದುವರಿಯಬಹುದು. ಜಯಿಸಲಿಕ್ಕೆ ನಮಗೆ ಪಾಪದ ಮಹಾ ಸಮಸ್ಯೆಯಿದ್ದರೆ, ನಮ್ಮನ್ನು ರಕ್ಷಿಸಲು ದೇವರು ಹೆಚ್ಚು ಕೃಪೆಯನ್ನು ಪ್ರಕಟಿಸಬೇಕು ಮತ್ತು ಈ ಮಹಾ ಕೃಪೆಯಿಂದ ತಾನು ಹೇಗೆ ದೊಡ್ಡವನಾಗಿದ್ದೇನೆ ಎಂಬುದನ್ನು ಸೂಚಿಸುವನು" ಎಂದು ಹೇಳಬಹುದು. ಈ ತಪ್ಪು ತಿಳುವಳಿಕೆಯನ್ನು ಪೌಲನು ನಿರೀಕ್ಷಿಸಿದ್ದನು ಮತ್ತು ರೋಮಾಪುರ 6ರ ಪ್ರಾರಂಭದಲ್ಲಿ ಅದಕ್ಕೆ ಸಂಬಂಧಿಸಿ ಒಂದು ಪ್ರಶ್ನೆಯನ್ನು ಕೇಳಿದನು: "ದೇವರ ಕೃಪೆಯು ಹೆಚ್ಚಲಿ ಎಂದು ಪಾಪದಲ್ಲಿ ಇನ್ನೂ ಇರಬೇಕೋ?" "ಎಂದಿಗೂ ಇರಬಾರದು!" ಎಂದು ಖಂಡಿತವಾಗಿ ಹೇಳುವದರಿಂದ ಈ ಪ್ರಶ್ನೆಗೆ ಉತ್ತರ ಕೊಟ್ಟನು "ಪಾಪಕ್ಕೆ ಸತ್ತವರಾದ ನಾವು ಅದರಲ್ಲಿ ಹೇಗೆ ಜೀವಿಸಿರಬೇಕು?" ಎಂದು ಅವನು ಕೇಳಿದನು "ಪಾಪದಲ್ಲಿ ಜೀವಿಸುವುದು ಕ್ರೈಸ್ತನಿಗೆ ಸರಿಯಾದದ್ದಾಗಿರುವದಿಲ್ಲ. ಯಾಕಂದರೆ ಅವನು ಅದಕ್ಕಾಗಿ ಆಗಲೇ ಸತ್ತು ಹೋಗಿದ್ದಾನೆ" ಎಂದು ಇನ್ನೊಂದು ರೀತಿಯಲ್ಲಿ

ಹೇಳಿದನು.

ಪೌಲನ ಪ್ರಕಾರವಾಗಿ, ಕ್ರಿಸ್ತನಲ್ಲಿ ನಾವು ಬಾಪ್ತಿಸ್ಮ ಹೊಂದುವವರೆಗೆ ಪಾಪಕ್ಕೆ ನಮ್ಮ ಮರಣವು ಅಂತಿಮವಾಗಿರುವದಿಲ್ಲ. ಪಾಪಕ್ಕೆ ನಮ್ಮ ಸ್ವಂತ ಆತ್ಮಿಕ ಮರಣದಲ್ಲಿ ನಾವು ಬಾಪ್ತಿಸ್ಮ ಹೊಂದಿದ್ದೇವೆಂದು ರೋಮಾಪುರ 6:4ರಲ್ಲಿ ಅವನು ಹೇಳಿದನು. ಹೀಗಿದ್ದರೂ, ಪಾಪಕ್ಕೆ ನಮ್ಮ ಸ್ವಂತ ಮರಣದಲ್ಲಿ ಈ ಬಾಪ್ತಿಸ್ಮಕ್ಕೆ ಮೊದಲು ನಂಬಿಕೆ, ಮಾನಸಾಂತರ, ಮತ್ತು ಯೇಸುವನ್ನು ಅರಿಕೆ ಮಾಡುವದರ ಮುಖಾಂತರ ಪಾಪದಿಂದ ಬೇರೆ ಯಾಗಿರತಕ್ಕದ್ದು. ಪೌಲನು ಈ ವಾಕ್ಯಭಾಗದಲ್ಲಿ ಪಾಪದಿಂದ ಬೇರ್ಪಡಿಸಲ್ಪಡುವದನ್ನು ನೇರವಾಗಿ ಹೇಳುವದಿಲ್ಲ; ಪಾಪಕ್ಕೆ ನಾವು ಸಾಯುವದರ ಉಲ್ಲೇಖದ ಮುಖಾಂತರ ಅವನು ಅದನ್ನು ಅನ್ವಯಿಸಿದ್ದಾನೆ. ಪಾಪದಿಂದ ಈ ಬೇರ್ಪಡುವಿಕೆಯು ಪಾಪಕ್ಕೆ ಮರಣದಿಂದ ಅನ್ವಯಿಸಲ್ಪಟ್ಟಿದ್ದು, ದೇವರಲ್ಲಿ ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಂದ (ಅಪೊಸ್ತಲರ ಕೃತ್ಯಗಳು 15:9), ಮಾನಸಾಂತರದಿಂದ (1 ಥೆಸಲೊನೀಕ 1:9), ಮತ್ತು ಯೇಸುವನ್ನು ಕ್ರಿಸ್ತನೂ ಕರ್ತನೂ ಎಂದು ಅರಿಕೆ ಮಾಡುವದರಿಂದ (ರೋಮಾಪುರ 10:10) ಪರಿಣಾಮಗೊಳ್ಳುತ್ತದೆ.

ಸುವಾರ್ತೆಯ ಮೊದಲಿನ ಕೆಲವು ಪ್ರಸಂಗಿಗಳು ಒಬ್ಬನು ಕ್ರೈಸ್ತನಾಗುವಾಗ ಮೂರು ಮಹತ್ವದ ಬದಲಾವಣೆಗಳು ಸಂಭವಿಸುವವೆಂದು ತೋರಿಸಿದ್ದಾರೆ. ಮೊದಲನೆಯ ಬದಲಾವಣೆಯು *ಹೃದಯದ ಬದಲಾವಣೆ,* ಹೃದಯದ ಶುದ್ಧೀಕರಣ ಆಗಿದೆ. ಬದಲಾವಣೆಯು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಆಗುತ್ತದೆ. "ಇದಲ್ಲದೆ ಆತನು ನಮಗೂ ಅವರಿಗೂ ಏನೂ ಭೇದಮಾಡದೆ ಅವರ ಹೃದಯಗಳನ್ನೂ ನಂಬಿಕೆಯ ಮೂಲಕವಾಗಿ ಶುದ್ಧೀಕರಿಸಿದನು" (ಅಪೊಸ್ತಲರ ಕೃತ್ಯಗಳು 15:9) ಎಂದು ಪೇತ್ರನು ಅನ್ಯರಿಗೆ ಹೇಳಿದನು. ಎರಡನೆಯ ಬದಲಾವಣೆಯು *ಜೀವನದಲ್ಲಿ ಬದಲಾವಣೆ,* ಪಾಪದ ಆಚರಣೆಯಿಂದ ಜೀವಿತವನ್ನು ಶುದ್ಧಮಾಡುವುದು. ಮಾನಸಾಂತರವೂ ಚಿತ್ತದ ಬದಲಾವಣೆಯಾಗಿದ್ದು, ಜೀವನದ ಬದಲಾವಣೆಯಲ್ಲಿ ಇಲ್ಲವೇ ಪುನರುಜ್ಜೀವ ನದಲ್ಲಿ ಪರಿಣಾಮಗೊಳ್ಳುತ್ತದೆ (ಅಪೊಸ್ತಲರ ಕೃತ್ಯಗಳು 11:18). ಮೂರನೆಯ ಬದಲಾವಣೆಯು *ಪ್ರತಿಷ್ಠೆಯ ಬದಲಾವಣೆ,* ಒಬ್ಬನ ನಂಬಿಕೆಯನ್ನೂ ನಿಷ್ಠೆಯನ್ನೂ ಸಾರುವಂಥದ್ದಾಗಿರುತ್ತದೆ. ಬದಲಾವಣೆಯು ಯೇಸುವನ್ನು ದೇವರ ಕುಮಾರನಂತೆ ಮತ್ತು ಕರ್ತನಂತೆ ಅರಿಕೆ ಮಾಡುವದರಿಂದ ಪರಿಣಾಮಗೊಳ್ಳುತ್ತದೆ (ರೋಮಾಪುರ 10:10). ನಾಲ್ಕನೆಯ ಬದಲಾವಣೆಯು *ಸ್ಥಿತಿಯ ಬದಲಾವಣೆ,* ಒಬ್ಬನನ್ನು ಕ್ರಿಸ್ತನೊಳಗೆ ಇಡುವುದಾಗಿರುತ್ತದೆ. ಈ ಬದಲಾವಣೆಯು ಬಾಪ್ತಿಸ್ಮದಲ್ಲಿ ಆಗುತ್ತದೆ (ರೋಮಾಪುರ 6:3). ನಾಲ್ಕು ಬದಲಾವಣೆಗಳಲ್ಲಿ ಮೂರು ಬದಲಾವಣೆಗಳು "ಪಾಪಕ್ಕೆ ಸತ್ತು ಹೋದದ್ದು" ಎಂಬ ಪೌಲನ ಪದ ಪ್ರಯೋಗದಲ್ಲಿ ಅನ್ವಯಿಸಲ್ಪಟ್ಟಿವೆ, ಮತ್ತು ನಾಲ್ಕನೆಯ ಬದಲಾವಣೆಯು ನಿರ್ದಿಷ್ಟವಾಗಿ ರೋಮಾಪುರ 6:4ರಲ್ಲಿ ನಮೂದಿಸಲ್ಪಟ್ಟಿದೆ. ಪೌಲನ ಪ್ರಕಾರವಾಗಿ, ಪಾಪಕ್ಕೆ ಸಂಪೂರ್ಣ ಮರಣವು ಎಲ್ಲಾ ನಾಲ್ಕೂ ಬದಲಾವಣೆಗಳು ಅನುಭವಿಸಲ್ಪಡುವ ವರೆಗೆ ಸಂಭವಿಸುವದಿಲ್ಲ ಎಂದಾಗುತ್ತದೆ.

ತಂದೆ, ಕುಮಾರ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಿದ, ಆದರೆ ಬಾಪ್ತಿಸ್ಮದ ನಂತರ ಕ್ರಿಸ್ತನಲ್ಲಿ ನೂತನ ಜೀವಿತವನ್ನು ಪ್ರದರ್ಶಿಸದೇ ಇರುವ ಜನರನ್ನು ನಾವೆಲ್ಲಾ ತಿಳಿದಿರುತ್ತೇವೆ. ಕ್ರಿಸ್ತನಲ್ಲಿ ಅವರ ಬಾಪ್ತಿಸ್ಮದ ನಂತರ, ಅವರು ಯಾವುದೇ ಬದಲಾವಣೆಯಿಲ್ಲದೇ ಪಾಪದ ತಮ್ಮ ಹಳೇ ಜೀವಿತಗಳಲ್ಲಿ ಮುಂದುವರಿದಿದ್ದಾರೆ. ಅವರ ಜೀವಿತಗಳಲ್ಲಿ ನೋಡುವಾಗ, ಅವರು ಯಾಕೆ ನೂತನ ಜೀವಿತದಲ್ಲಿ ಪ್ರವೇಶಿಸಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದೇವೆ. ಪೌಲನು ರೋಮಾಪುರ 6ರಲ್ಲಿ ಒಂದು ಉತ್ತರವನ್ನಾದರೂ

ಕೊಟ್ಟಿದ್ದಾನೆ. "ಪಾಪದಿಂದ ಅವರು ತಮ್ಮನ್ನು ಬೇರ್ಪಡಿಸಿಕೊಂಡಿರುವರೋ? ದೇವರು ಪುನರುಜ್ಜೀವಿಸುವದಕ್ಕಾಗಿ ಮಾಡುವಂಥದ್ದಕ್ಕೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡಿರುವರೋ?" ಎಂದು ಅವನು ಕೇಳುವನು. ಯಾವುದೇ ಕಾರಣಕ್ಕಾಗಿ ಈ ಬೇರ್ಪಡಿಸುವಿಕೆಯನ್ನು ತಪ್ಪಿಸಿಕೊಂಡಿದ್ದರೆ, ಕ್ರಿಸ್ತನಲ್ಲಿ ನೂತನ ಜೀವಿತವನ್ನು ಒಬ್ಬನು ಪ್ರವೇಶಿಸಲಾರನು.

ಕ್ರಿಸ್ತನಲ್ಲಿ ಯಥಾರ್ಥವಾದ ನಂಬಿಕೆ, ಪಾಪಕ್ಕಾಗಿ ಮಾನಸಾಂತರ, ಮತ್ತು ಯೇಸುವನ್ನು ಕ್ರಿಸ್ತನಂತೆ ಮತ್ತು ಕರ್ತನಂತೆ ಅರಿಕೆ ಮಾಡುವದರಿಂದ ಬೇರ್ಪಡುವ ಹಂತದ ಮುಖಾಂತರ *ನೀನು* ಹೋಗಿರುವಿಯೋ?

## ಹಂತ ಎರಡು: ರಕ್ಷಣೆ

ದೇವರು ಪುನಃ ರಚಿಸುವ ಸರಣಿಯ ಎರಡನೆಯ ಹಂತವನ್ನು ನಾವು ರಕ್ಷಣೆಯ ಹಂತ ಎಂದು ಕರೆಯುತ್ತೇವೆ. ಈ ಹಂತದಲ್ಲಿ ನಾವು ನಿಜವಾಗಿಯೂ ಕ್ರಿಸ್ತನ ಆತ್ಮಿಕ ದೇಹದಲ್ಲಿ ತರಲ್ಪಡುತ್ತೇವೆ. ಅದ್ವಿತೀಯವಾಗಿ, ಈ ಹಂತವು ಬಾಪ್ತಿಸ್ಮದ ಸುತ್ತ ತಿರುಗುತ್ತದೆ.

ರೋಮಾಪುರ 6:3, 4ರಲ್ಲಿ ಪೌಲನು ಹೀಗೆ ಬರೆದನು:

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.

ಹೊಸ ಒಡಂಬಡಿಕೆಯಲ್ಲಿ ಎಲ್ಲಿ ತಿರಿಗಿ, ಇಷ್ಟು ಅಲ್ಪ ಸ್ಥಳದಲ್ಲಿ ಬಾಪ್ತಿಸ್ಮದ ಬಗ್ಗೆ ಇಷ್ಟು ಹೆಚ್ಚಾಗಿ ನಮಗೆ ಹೇಳುವಂಥದ್ದನ್ನು ಎಲ್ಲಿ ಕಂಡುಕೊಳ್ಳಬಹುದು? ಈ ಎರಡು ವಚನಗಳಿಂದ ಬಾಪ್ತಿಸ್ಮದ ಬಗ್ಗೆ ನಾಲ್ಕು ಮಹತ್ವದ ಸಂಗತಿಗಳು *ಸ್ಪಷ್ಟವಾಗಿವೆ.*

ಮೊದಲನೆಯದು, ಬಾಪ್ತಿಸ್ಮವು ಕ್ರಿಸ್ತನಲ್ಲಿ ಸೇರುವದಕ್ಕೆ ಎಂದು ಪೌಲನು ಹೇಳಿ ದ್ದಾನೆ: "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ..." (ವಚನ 3). ಬಾಪ್ತಿಸ್ಮದಲ್ಲಿ ಕ್ರಿಸ್ತನ ಆತ್ಮಿಕ ದೇಹವಾದ, ಸಭೆಯಲ್ಲಿ ದೇವರ ಕೃಪೆಯಲ್ಲಿ ನಾವು ತರಲ್ಪಟ್ಟಿದ್ದೇವೆ. ಬಾಪ್ತಿಸ್ಮವು ಕ್ರಿಸ್ತನಿಗೆ ನಮ್ಮ ನಂಬಿಕೆಯ ಉತ್ತರದ ಅಂತಿಮ ಭಾಗವಾಗಿದೆ (ಗಲಾತ್ಯ 3:26, 27; 2 ತಿಮೊಥೆ 2:10).

ಎರಡನೆಯದು, "ನಾವು ಆತನ [ಕ್ರಿಸ್ತನ] ಮರಣದಲ್ಲಿ ಬಾಪ್ತಿಸ್ಮ ಹೊಂದಿರುವೆವೆಂದು ಪೌಲನು ಹೇಳಿದ್ದಾನೆ" (ವಚನ 3). ಹೊಸ ಒಡಂಬಡಿಕೆಯ ಬಾಪ್ತಿಸ್ಮದಲ್ಲಿ ಕ್ರಿಸ್ತನ ಮರಣದ ಲಾಭಗಳೊಂದಿಗೆ ಐಕ್ಯತೆಯೊಳಗೆ ತರಲ್ಪಟ್ಟಿದ್ದೇವೆ. ಯೇಸುವು ನಮಗೆ ತನ್ನ ಮರಣದಲ್ಲಿ ಲಭ್ಯವಿರುವಂತೆ ಮಾಡಿದ್ದನ್ನು ನಾವು ಬಾಪ್ತಿಸ್ಮದಲ್ಲಿ ಹೊಂದಿಕೊಳ್ಳುತ್ತೇವೆ.

ಮೂರನೆಯದು, ನಾವು ಬಾಪ್ತಿಸ್ಮದಲ್ಲಿ ಹೂಣಲ್ಪಟ್ಟೆವು ಎಂಬುದನ್ನು ಪೌಲನು ದೃಢಪಡಿಸಿದನು: "ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿ ಕೊಂಡಾಗ, ಆತನ ಮರಣದಲ್ಲಿ ಆತನೊಂದಿಗೆ ಹೂಣಲ್ಪಟ್ಟೆವು" (ವಚನ 4). ಹೊಸ ಒಡಂಬಡಿಕೆಯ

ಬಾಪ್ತಿಸ್ಮವು ಹೂಣಿಡುವಿಕೆಯಾಗಿರುವುದು ಇಲ್ಲವೇ ಮುಳುಗೇಳಿಸುವಿಕೆಯಾಗಿರುವುದು. *Baptizo* ಎಂಬ ಗ್ರೀಕ ಪದವು ನಮ್ಮ ಹೆಚ್ಚಾದ ಭಾಷಾಂತರಗಳಲ್ಲಿ ಭಾಷಾಂತರಿಸಲ್ಪಟ್ಟಿರುವದಿಲ್ಲ - ಅದು ಶಬ್ದಾಂತರ ಮಾಡಲ್ಪಟ್ಟಿದೆ. ಶಬ್ದಾಂತರದಲ್ಲಿ, ಗ್ರೀಕ್ ಪದ ಇಂಗ್ಲೀಷ್ ಪದವಾಗಿ ಬದಲಾಯಿಸಲ್ಪಟ್ಟಿದೆ. ಒಂದಾಗಿ ಹೋಗುವ ಇಂಗ್ಲೀಷ್ ಪದವು ಗ್ರೀಕ್ ಪದವಾಗಿ ಭಾಷಾಂತರಿಸಲ್ಪಟ್ಟಿದೆ. ಗ್ರೀಕ್ ಪಂಡಿತರ ಪ್ರಕಾರವಾಗಿ, *baptizo* ಎಂಬುದಕ್ಕೆ ಸಂಬಂಧಿಸಿದ ಇಂಗ್ಲೀಷ್ ಪದದ ಅರ್ಥ "ಮುಳುಗೇಳಿಸುವುದು" ಎಂದಾಗಿದೆ. *Baptizo*ದ ವಿವರಣೆಯು ಈ ವಚನದಲ್ಲಿ ಪೌಲನು ಉಪಯೋಗಿಸಿದ ಮಾರ್ಗದಿಂದ ದೃಢಪಡಿಸಲ್ಪಟ್ಟಿದೆ (ಕೊಲೊಸ್ಸೆ 2:12). ಹೊಸ ಒಡಂಬಡಿಕೆಯ ಬಾಪ್ತಿಸ್ಮವು ಹೂಣಿಡುವಿಕೆ ಇಲ್ಲವೇ ಮುಳುಗೇಳಿಸುವಿಕೆಯಾಗಿದೆಯೆಂಬುದು ನಿಶ್ಚಿತ ವಾಗಿದೆ.

ನಾಲ್ಕನೆಯದು, ನಾವು ಪಾಪಕ್ಕೆ ನಮ್ಮ ಸ್ವಂತ ಆತ್ಮಿಕ ಮರಣದೊಳಗೆ ನಾವು ಬಾಪ್ತಿಸ್ಮ ಹೊಂದಿದೆವೆಂದು ಪೌಲನು ಬರೆದನು, "ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ವಚನ 4) ಎಂದು ಅವನು ಹೇಳಿದನು. ಪಾಪಕ್ಕೆ ನಮ್ಮ ಮರಣವು ಬಾಪ್ತಿಸ್ಮದಲ್ಲಿ ಅಂತಿಮ ಗೊಳಿಸಲ್ಪಟ್ಟಿತು. ನಂಬಿಕೆ, ಮಾನಸಾಂತರ, ಯೇಸುವಿನ ಅರಿಕೆ ಮತ್ತು ಬಾಪ್ತಿಸ್ಮದ ಮುಖಾಂತರ, "ಪಾಪಧೀನ ಸ್ವಭಾವವು ನಾಶವಾಗಿ ನಾನು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೇ" (ರೋಮಾಪುರ 6:6, 7).

ಕ್ರಿಸ್ತನ ಜೀವನದಲ್ಲಿ ಮಹತ್ವದ ಘಟನೆಗಳಲ್ಲಿ ಒಂದು ಯೋಹಾನನಿಂದ ಆತನ ಬಾಪ್ತಿಸ್ಮವಾಗಿದೆ. ಆತನ ಭೂಲೋಕದ ಸೇವೆಯು ಆತನ ಬಾಪ್ತಿಸ್ಮ ಮತ್ತು ಆತನ ಶೋಧನೆಗಳಿಂದ ಪರಿಪೂರ್ಣಗೊಳಿಸಲ್ಪಟ್ಟಿದೆ. ಯೇಸು ಯೊರ್ದನ್ ತೀರದಲ್ಲಿ ಕಂಡುಕೊಂಡಾಗ ಮತ್ತು ತನಗೆ ಬಾಪ್ತಿಸ್ಮ ಮಾಡಿಸಬೇಕೆಂದು ಯೋಹಾನನ ಬಳಿಗೆ ಹೋದಾಗ, ಯೋಹಾನನು ಬಾಪ್ತಿಸ್ಮ ಮಾಡಿಸಲು ಹಿಂಜರಿದನು, "ನಾನು ನಿನ್ನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇ?" (ಮತ್ತಾಯ 3:14) ಎಂದು ಹೇಳಿದನು. "ಈಗ ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ" ಎಂದು ಯೇಸು ಹೇಳಿದನು (ಮತ್ತಾಯ 3:15). ಬಾಪ್ತಿಸ್ಮ ಮಾಡಿಸಿಕೊಂಡ ಕೂಡಲೇ ನೀರಿನಿಂದ ಮೇಲಕ್ಕೆ ಬರಲು ಎರಡು ಮಹತ್ವದ ಘಟನೆಗಳು ನಡೆದವು. ಪರಲೋಕದಲ್ಲಿಯ ಆತನ ತಂದೆಯು ಬಹಿರಂಗವಾಗಿ, ಈ ಮಾತುಗಳಿಂದ, ಮೊದಲನೆಯ ಸಲ, ಒಪ್ಪಿಕೊಂಡನು, "ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ" (ಮತ್ತಾಯ 3:17), ಮತ್ತು ಪರಿಶುದ್ಧಾ ತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು (ಮತ್ತಾಯ 3:16). ಯಾರ ಮೇಲೆ ಪರಿಶುದ್ಧಾತ್ಮನು ಇಳಿದು ಬಂದು ಉಳಿದುಕೊಳ್ಳುವನೋ ಆತನು ದೇವರ ಕುಮಾರನು ಆಗಿರುವನೆಂದು ಯೋಹಾನನಿಗೆ ಹೇಳಲ್ಪಟ್ಟಿತ್ತು (ಯೋಹಾನ 1:33). ಆದುದರಿಂದ, ಯೇಸುವಿನ ಬಾಪ್ತಿಸ್ಮದಿಂದ ಮುಂದೆ ಯೋಹಾನನು ಆತನ ದೈವತ್ವಕ್ಕೆ ಸಾಕ್ಷಿಕೊಟ್ಟನು (ಯೋಹಾನ 1:29). ಯೇಸುವಿನ ಬಾಪ್ತಿಸ್ಮವು ಆತನ ಸೇವೆಯ ಪ್ರಾರಂಭವನ್ನು ಗುರುತಿಸಿತು.

ಯೇಸುವಿನ ಬಾಪ್ತಿಸ್ಮದ ಮಹತ್ವವನ್ನು ನಮ್ಮ ಬಾಪ್ತಿಸ್ಮದ ಮಹತ್ವವನ್ನು

ಜ್ಞಾಪಿಸುತ್ತದೆ. ನಮ್ಮ ಬಾಪ್ತಿಸ್ಮವು ಎಷ್ಟು ವಿಶೇಷವಾದದ್ದು ಎಂಬುದನ್ನು ಯೋಚಿಸಿರಿ. ಪೌಲನ ಪ್ರಕಾರವಾಗಿ, ನಾವು ಕ್ರಿಸ್ತನಲ್ಲಿ ಮತ್ತು ಆತನ ದೇಹದಲ್ಲಿ ಸಭೆಯಲ್ಲಿ ಹೂಣಲ್ಪಟ್ಟಿದ್ದೇವೆ. ಆತನ ಮರಣದೊಂದಿಗೆ ಮತ್ತು ಆತನ ಮರಣದ ಲಾಭಗಳೊಂದಿಗೆ ನಾವು ಐಕ್ಯತೆಯಲ್ಲಿ ತರಲ್ಪಟ್ಟಿದ್ದೇವೆ. ಪಾಪಕ್ಕೆ ನಮ್ಮ ಸ್ವಂತ ಮರಣದಲ್ಲಿ ನಾವು ಬಾಪ್ತಿಸ್ಮ ಹೊಂದಿದ್ದೇವೆ, ಪಾಪದ ನಮ್ಮ ಹಳೇ ಮನುಷ್ಯನು ನಮ್ಮಿಂದ ಬೇರ್ಪಡಿಸಲ್ಪಡುವಾಗ ಮತ್ತು ನೂತನ ಜೀವನದಲ್ಲಿ ನಡೆಯಲು ನಾವು ಎಬ್ಬಿಸಲ್ಪಟ್ಟಿದ್ದೇವೆ.

ದೇವರು ನಮ್ಮ ಪುನಃ ಮಾಡುವ ಈ ಹಂತದ ಮುಖಾಂತರ *ನೀನು* ದಾಟಿಹೋಗಿರುವಿಯೋ? ಕ್ರಿಸ್ತನಲ್ಲಿ ಆತನ ಮರಣದೊಳಗೆ, ಮತ್ತು ಪಾಪಕ್ಕೆ ನಿನ್ನ ಸ್ವಂತ ಆತ್ಮಿಕ ಮರಣದಲ್ಲಿ *ನೀನು* ಬಾಪ್ತಿಸ್ಮ ಹೊಂದಿರುವಿಯೋ?

## ಹಂತ ಮೂರು: ಅದರೊಂದಿಗೆ ಇರು

ದೇವರು ಪುನಃ ರಚಿಸುವ ವಿಶೇಷ ವಿಧಾನದಲ್ಲಿ ಮೂರನೆಯ ಹಂತವನ್ನು, ಅದರೊಂದಿಗೆ ಇರುವಿಕೆ ಎಂದು ಕರೆಯಬಹುದು. ಒಮ್ಮೆ ನಾವು ಪುನಃ ಮಾಡಲ್ಪಟ್ಟಾಗ, ನಾವು ಪುನಃ ಮಾಡಲ್ಪಟ್ಟವರಾಗಿಯೇ ಇರಬೇಕು. ದೇವರು ನಮಗೆ ಹೊಸ ಜೀವ ಕೊಡಬಹುದು, ಆದರೆ ನಾವು ಅದನ್ನು ಜೀವಿಸತಕ್ಕದ್ದು. ಆತನು ನಮ್ಮನ್ನು S & N Road ಮೇಲೆ, ನೇರವಾದ ಮತ್ತು ಇಕ್ಕಟ್ಟಾದ ಮಾರ್ಗದಲ್ಲಿ ಇಡಬಹುದು, ಆದರೆ ನಾವು ಅದರ ಮೇಲೆಯೇ ಉಳಿದುಕೊಳ್ಳಬೇಕು.

ರೋಮಾಪುರ 6ರ ಉಳಿದ ವಚನಗಳಲ್ಲಿ, ಕ್ರಿಸ್ತನಲ್ಲಿ ನಮಗಿರುವ ನೂತನ ಜೀವನದ ನಾಲ್ಕು ಗುಣಲಕ್ಷಣಗಳನ್ನು ಪೌಲನು ಯಾದಿ ಮಾಡಿದ್ದಾನೆ. ನೂತನ ಜೀವನದ ಗುಣಲಕ್ಷಣಗಳಲ್ಲಿ ಪ್ರತಿಯೊಂದನ್ನು ಅನುದಿನವೂ ಕೈಕೊಳ್ಳತಕ್ಕದ್ದು.

ಮೊದಲನೆಯದು, ಕ್ರಿಸ್ತನಲ್ಲಿ ನಮಗೆ ಒಂದು ನೂತನ ಸ್ವಾತಂತ್ರ್ಯವಿರುವುದು - ನಾವು ಪಾಪದಿಂದ ಸ್ವತಂತ್ರವಾಗಿರುವೆವು ಎಂದು ಹೇಳಿದನು. "ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ" (ರೋಮಾಪುರ 6:7). ಸ್ವಾತಂತ್ರವು ಒಂದು ವಿಷಯಕ್ಕೆ ಸಂಬಂಧಿಸಿದ ಮಾತಾಗಿರುತ್ತದೆ. ಅದಕ್ಕೆ ನಿಜವಾದ ಅರ್ಥವಿರುವ ಮೊದಲು ನಿರ್ದಿಷ್ಟವಾದ ಹಿನ್ನಲೆ ಕೊಡಲ್ಪಡತಕ್ಕದ್ದು. ಯಾವನಾದರೂ, "ನಾನು ಸ್ವತಂತ್ರನಾಗಿರಲು ಬಯಸುತ್ತೇನೆ" ಎಂದು ಹೇಳುವಾಗ, "ಯಾವುದರಿಂದ ಸ್ವಾತಂತ್ರ್ಯ?" ಎಂದು ನಾನು ಕೇಳಲು ಬಯಸುತ್ತೇನೆ. ಒಬ್ಬನು ಕೇವಲ ಸ್ವತಂತ್ರವಾಗಿರಲಾರನು. ಅವನು ಕೆಲಸ ಮಾಡುವದರಿಂದ ಸ್ವತಂತ್ರನಾಗಿರಲು ಬಯಸುವನೋ? ನಿಯಮಗಳಿಂದ ಸ್ವತಂತ್ರವಾಗಿರುವದನ್ನೋ? ಮಲಗುವದರಿಂದ ಸ್ವತಂತ್ರವಾಗಿರುವದನ್ನೋ? ಒಬ್ಬನು *ಯಾವುದಾದರೊಂದಿನಿಂದ* ಸ್ವತಂತ್ರನಾಗಿರಬೇಕು. "ಸ್ವತಂತ್ರ," "ಸ್ವತಂತ್ರನಾಗಿ ಮಾಡಲ್ಪಟ್ಟದ್ದು," ಮತ್ತು "ಸ್ವಾತಂತ್ರ್ಯ" ಎಂಬವುಗಳನ್ನು ರೋಮಾಪುರ 6ರ ಹಿನ್ನಲೆಯಲ್ಲಿ ಪೌಲನು ಕೊಟ್ಟನು. ಕ್ರಿಸ್ತನಲ್ಲಿ ನಾವು ಪಾಪದಿಂದ ಸ್ವತಂತ್ರರಾಗಿದ್ದೇವೆಂದು ಅದರ ಅಪರಾಧದಿಂದ ಸ್ವತಂತ್ರರಾಗಿದ್ದೇವೆಂದು ಅವನು ಹೇಳಿದನು (ರೋಮಾಪುರ 3:24; 6:3); ಅದರ ಹಿಡಿತದಿಂದ (ರೋಮಾಪುರ 6:17); ಮತ್ತು ಅದರ ಸಮಾಧಿಯಿಂದ ಇಲ್ಲವೇ ದಂಡನೆಯಿಂದ (ರೋಮಾಪುರ 6:21) ಸ್ವತಂತ್ರರಾಗಿದ್ದೇವೆಂದು ಹೇಳಿದನು.

ಎರಡನೆಯದು, ನೂತನ ಅನ್ಯೋನ್ಯತೆಯಿಂದ ನೂತನ ಜೀವಿತವು ಗುರುತಿಸಲ್ಪಟ್ಟಿದೆ - ದೇವರೊಂದಿಗೆ ನಮಗೆ ಅನ್ಯೋನ್ಯತೆ ಇದೆಯೆಂದು ಪೌಲನು ಹೇಳಿದನು. "ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ

ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ" (ರೋಮಾಪುರ 6:11). ಈ ವಚನದಲ್ಲಿ ಎರಡು ವಿರೋಧಗಳು ಕಂಡು ಬರುತ್ತವೆ; ಒಂದು ಅನ್ವಯಿಸಲ್ಪಟ್ಟಿದೆ ಇನ್ನೊಂದು ವ್ಯಕ್ತಪಡಿಸಲ್ಪಟ್ಟಿದೆ. ಅನ್ವಯಿಸಲ್ಪಟ್ಟ ಸತ್ಯವು, ನೀವು ಕ್ರೈಸ್ತರಾಗುವ ಮೊದಲು ದೇವರ ಕಡೆಗೆ ಸತ್ತವರೂ ಪಾಪದ ಕಡೆಗೆ ಜೀವಿಸುವವರೂ ಆಗಿದ್ದೀರೆಂದು ಹೇಳುತ್ತದೆ. ವ್ಯಕ್ತಪಡಿಸಲ್ಪಟ್ಟ ವಿರೋಧವು ಕ್ರೈಸ್ತನಂತೆ, ದೇವರ ಕಡೆಗೆ ಜೀವಿಸುವವರೂ ಪಾಪದ ಕಡೆಗೆ ಸತ್ತವರೂ ಆಗಿದ್ದೀರೆಂದು ಹೇಳುತ್ತದೆ. ಕ್ರಿಸ್ತನಲ್ಲಿ ನೀವು ದೇವರೊಂದಿಗೆ ನೀವು ನೂತನ ಅನ್ಯೋನ್ಯತೆಯಲ್ಲಿ, ಒಂದು ನೂತನ ಸಂಬಂಧದಲ್ಲಿ ಬಂದವರಾಗಿರುತ್ತೀರಿ. ನಿಮಗೆ ಪ್ರಾರ್ಥಿಸುವದಕ್ಕಾಗಿ ಪರಲೋಕದ ತಂದೆಯೂ, ಪ್ರೀತಿಯುಳ್ಳ ರಕ್ಷಕನ ಮುಖಾಂತರ ಪ್ರಾರ್ಥಿಸುವುದೂ ಇರುತ್ತದೆ. ದೇವರ ಅಸ್ತಿತ್ವದ, ಅನ್ಯೋನ್ಯತೆಯ, ಆಶೀರ್ವಾದಗಳ, ವಾಗ್ದಾನಗಳ, ಮತ್ತು ಆತನು ಕೊಡುವ ಆತ್ಮಿಕ ಜೀವನದ ಕಡೆಗೆ ನೀವು ಸಜೀವಿಗಳಾಗಿದ್ದೀರಿ.

ಮೂರನೆಯದಾಗಿ, ಕ್ರಿಸ್ತನಲ್ಲಿ ನೂತನ ಜೀವನವು ಒಂದು ಹೊಸ ಫಲಭರಿತತೆಯಿಂದ ಲಕ್ಷಣ ಹೊಂದಿದೆ ಎಂದು ಪೌಲನು ವಿವರಿಸಿದನು.

> ಆದರೆ ನೀವು ಆಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ [ಫಲವೇನು]? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ. ಕಡೆಗೆ ಅವುಗಳಿಂದ ಬರುವದು ಮರಣವಲ್ಲವೇ. ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವುದೇ ನಿಮಗೆ ಫಲ; ಕಡೆಗೆ ದೊರೆಯುವಂಥದ್ದು ನಿತ್ಯಜೀವ (ರೋಮಾಪುರ 6:21, 22).

ಕ್ರೈಸ್ತನಲ್ಲದವನು ಒಂದು ರೀತಿಯ ಫಲವನ್ನು ತರುವನು, ಆದರೆ ಕೊನೆಯವರೆಗೆ ಉಳಿಯುವ, ಲಾಭದಾಯಕವಾದ ಫಲವಾಗಿರುವದಿಲ್ಲ - "ಆ ಸಂಗತಿಗಳ ಅಂತ್ಯವು ಮರಣವೇ" ಜೀವನದ ಅಲ್ಪ ಕಾಲವು ದಾಟಿಹೋಗುವಾಗ, ಕ್ರೈಸ್ತನು ಸದಾಕಾಲ ಉಳಿಯುವ ಫಲವನ್ನು ತರುವನು. ಕ್ರೈಸ್ತ ಸದ್ಗುಣದ ಆತ್ಮಿಕ ಫಲವನ್ನು ಮತ್ತು "ಎಂದೆಂದಿಗೂ" ನಿತ್ಯಜೀವದ ಫಲವನ್ನು ಅವನು ಉತ್ಪಾದಿಸುವನು.

ನಾಲ್ಕನೆಯದಾಗಿ, ಕ್ರಿಸ್ತನಲ್ಲಿ ನೂತನ ಜೀವಿತವು ನೂತನ ಭವಿಷ್ಯದಿಂದ ಗುರುತಿಸಲ್ಪಡುವುದೆಂದು ಪೌಲನು ಹೇಳಿದನು: "ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" (ರೋಮಾಪುರ 6:23). ಕ್ರೈಸ್ತನು ಪರಲೋಕಕ್ಕೆ ತನ್ನ ಮಾರ್ಗದಲ್ಲಿರುವನು. ಜೀವದ ಪುಸ್ತಕದಲ್ಲಿ, ಬೈಬಲಿನಲ್ಲಿ ಕೊನೆಯ ಅಧ್ಯಾಯವನ್ನು ಅವನು ಓದಿರುವನು. ಮತ್ತು ಕರ್ತನ ಪಕ್ಷವು ಜಯಿಸುವದೆಂದು ಅವನು ತಿಳಿದಿರುವನು. ಅವನು ಜಜ್ಜಲ್ಪಟ್ಟವನೂ ಕೆಲವು ಸಲ ಗಾಯ ಹೊಂದಿದವನೂ ಆಗುವದರಿಂದ ಈ ಜಗತ್ತಿನಲ್ಲಿ ಅವನು ಹೋರಾಡಬಹುದು, ಆದರೆ ಅಂತಿಮ ಜಯ ತನ್ನದೆಂದು ತಿಳಿದಿರುವನು!

ಕ್ರಿಸ್ತನಲ್ಲಿ ನೂತನ ಜೀವನವು ಯಥಾರ್ಥವುಳ್ಳ ಹೃದಯವುಳ್ಳವನಿಗೆ ಮತ್ತು ಒಳ್ಳೇ ಜೀವಿತ ಜೀವಿಸಲು ಬಯಸುವವನಿಗೆ ಆಕರ್ಷಕವಾಗಿರುವುದು. ಒಂದು ನೂತನ ಜೀವಿತವು ನಾವು ಕ್ರೈಸ್ತರಾಗುವಾಗ ನಮ್ಮದಾಗುವುದು - ಪಾಪದಿಂದ ಸ್ವತಂತ್ರವಾದ ಒಂದು ಜೀವನ, ಆತನೊಂದಿಗೆ ಅನ್ಯೋನ್ಯತೆಯ ಜೀವನ, ಫಲಭರಿತತೆ ಒಂದು ಜೀವಿತ, ಮತ್ತು ಪರಲೋಕದಲ್ಲಿ ಒಂದು ನಿತ್ಯ ಭವಿಷ್ಯದೊಂದಿಗಿನ ಒಂದು ಜೀವಿತ.

ನೂತನ ಜೀವವು ಕಾದಿಡಲ್ಪಡಬೇಕು ಮತ್ತು ಕಾಪಾಡಲ್ಪಡಬೇಕು. ಸ್ವಂತವಾಗಿಸಿಕೊಳ್ಳಲು, ನಡಿಸಲು ಮತ್ತು ಆನಂದಿಸಲು ಒಂದು ಹೊಸ ಕಾರು ನಿಮಗೆ ಕೊಡಲ್ಪಡುತ್ತದೆ ಎಂದು ಕಲ್ಪಿಸಿಕೊಳ್ಳಿರಿ. ಕೆಲ ಸಮಯದ ವರೆಗೆ ನೀವು ಆನಂದಿಸಲು ಬಯಸಿದರೆ ಅದನ್ನು ಕಾಪಾಡಿಕೊಳ್ಳುವ ಜವಾಬ್ದಾರಿಕೆ ನಿಮಗಿರುವುದು. ನೀವು ಅದನ್ನು ಜವಾಬ್ದಾರಿಕೆಯಿಂದ ಕಾರು ನಡಿಸದಿದ್ದರೆ, ಯಂತ್ರದ ಬಗ್ಗೆ ಕಾಳಜಿ ವಹಿಸದಿದ್ದರೆ, ಟಯರುಗಳಲ್ಲಿ ಗಾಳಿಯನ್ನು ಸರಿಯಾಗಿ ಹಾಕದಿದ್ದರೆ, ಮತ್ತು ಗ್ಯಾಸೊಲಿನ್ ಒದಗಿಸದಿದ್ದರೆ, ಬಹಳ ಸಮಯದ ವರೆಗೆ ಕಾರು ನಿಮ್ಮದಾಗಿರುವದಿಲ್ಲ.

ಕ್ರೈಸ್ತನು ಪಾಪದಿಂದ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು. ತನ್ನ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಬೇಕು ಮತ್ತು ದುಷ್ಟತ್ವವು ತಮ್ಮ ಜೀವಿತದ ಮೇಲೆ ಅಧಿಕಾರನಡೆಸಲು ಹಿಂದಿರುಗದಂತೆ ನೋಡಿಕೊಳ್ಳಬೇಕು. ಪ್ರಾರ್ಥನೆಯ, ಬೈಬಲ್ ಅಧ್ಯಯನದ, ಇತರ ಕ್ರೈಸ್ತರೊಂದಿಗೆ ಅನ್ಯೋನ್ಯತೆಯ, ಮತ್ತು ದೇವರೊಂದಿಗೆ ಅನುದಿನ ನಡೆಯುವಿಕೆಯ ಮುಖಾಂತರ ದೇವರೊಂದಿಗೆ ತನ್ನ ಅನ್ಯೋನ್ಯತೆಯನ್ನು ಬೆಳೆಸಿಕೊಳ್ಳಬೇಕು. ಬೆಳೆಯುವದಕ್ಕೆ ಪ್ರಯತ್ನಿಸುವದರಿಂದ, ಇತರರನ್ನು ಕ್ರಿಸ್ತನ ಕಡೆಗೆ ನಡಿಸಲು ಹುಡುಕುವದರಿಂದ, ಮತ್ತು ತನ್ನಲ್ಲಿಯೂ ಇತರರಲ್ಲಿಯೂ ಸದ್ಗುಣವನ್ನು ಕಟ್ಟುವದರಿಂದ, ಅವನು ಫಲವನ್ನು ಉತ್ಪಾದಿಸುತ್ತ ಮುಂದುವರಿಯತಕ್ಕದ್ದು. ತನ್ನ ಹೃದಯದಲ್ಲಿ ಈ ನಿರೀಕ್ಷೆಯು ಹೊಳೆಯುತ್ತ ಉರಿಯುವಂತೆ ಮಾಡುವದರಿಂದ ನಿತ್ಯ ಜೀವದ ತನ್ನ ನಿರೀಕ್ಷೆಯನ್ನು ದೃಢಪಡಿಸಿಕೊಳ್ಳತಕ್ಕದ್ದು.

## ಮುಕ್ತಾಯ

ಇಂದು ನೀನು ಕ್ರಿಸ್ತನಲ್ಲಿ ನೂತನ ವ್ಯಕ್ತಿಯಾಗಿರಬಹುದು. ದೇವರು ತನ್ನ ವಾಕ್ಯದ ಮುಖಾಂತರವಾಗಿ, ಆತನು ನಿನ್ನನ್ನು ಪುನಃ ಮಾಡುವಂತೆಯೂ ಕ್ರಿಸ್ತನಲ್ಲಿ ತನ್ನ ನೂತನ ಜೀವಿತವನ್ನು ನಿನಗೆ ಕೊಡುವಂತೆಯೂ ನಿನ್ನನ್ನು ಪುನಃ ಮಾಡುವ ವಿಧಾನಕ್ಕೆ ನಿನ್ನನ್ನು ಒಪ್ಪಿಸಿಕೊಡಬೇಕೆಂದು ಕೇಳುತ್ತಾನೆ. ಆತನ ವಿಧಾನವು ಬೇರ್ಪಡಿಸುವಿಕೆಯನ್ನೂ, ರಕ್ಷಣೆಯನ್ನೂ, ಮತ್ತು ಅದರೊಂದಿಗೆ ಇರುವದನ್ನೂ ಒಳಗೊಂಡಿರುತ್ತದೆ. ಪ್ರತಿಯೊಂದು ಹಂತವು ಮಹತ್ವವುಳ್ಳದ್ದೂ ಅವಶ್ಯಕವಾದದ್ದೂ ಆಗಿರುತ್ತದೆ.

ಕ್ರಿಸ್ತನಲ್ಲಿ ಈ ನೂತನ ಜೀವವು ಹೇಗಿರಬಹುದೆಂದು ಯೋಚಿಸಿರಿ! ಹಲವಾರು ದಿನ ಮನೆಯಿಂದ ದೂರ ಹೋಗಿದ್ದು. ಅನಂತರ ನೀವು ಹಿಂದಿರುಗಿ ಬಂದು ನಿಮ್ಮ ಮನೆಯಲ್ಲಿ ಪ್ರತಿಯೊಂದೂ ಅಚ್ಚ ಹೊಸದಾಗಿರುವದನ್ನು ಕಂಡುಕೊಳ್ಳುವಿರೆಂದು ಕಲ್ಪಿಸಿರಿ. ನೀವು ಹೊರಟು ಹೋಗಿದ್ದಾಗ, ಯಾರೋ ಒಬ್ಬರು ಬಂದು ಪ್ರತಿಯೊಂದನ್ನು ಹೊಸದಾಗಿ ಮಾಡಿರುವರು. ನೀವೇನು ಮಾಡುವಿರಿ? ಬಹುಶಃ ನೀವು ಮನೆಯಲ್ಲಿ ಇರುವದೆಲ್ಲವನ್ನೂ ಪರೀಕ್ಷಿಸುವಿರಿ. ನೀವು ಹೊಸ ಖುರ್ಚಿಗಳನ್ನು, ಹೊಸ ಟೇಬಲುಗಳನ್ನು, ಹೊಸ ಹಾಸಿಗೆಗಳನ್ನು, ಹೊಸ ಟವೆಲುಗಳನ್ನು, ಹೊಸ ಬಟ್ಟೆಗಳನ್ನು, ಹೊಸ ಶ್ಯೂಗಳನ್ನು, ಹೊಸ ಉಪಕರಣಗಳನ್ನು, ಹೊಸ ಕಾರ್ಪೆಟುಗಳನ್ನೂ, ರಗ್ಗುಗಳನ್ನೂ, ಇತರ ಅನೇಕ ಹೊಸ ಸಂಗತಿಗಳನ್ನು ನೋಡುವಿರಿ. ನಿಮ್ಮ ಹೊಸ ಸೊತ್ತಿಗಾಗಿ ನೀವು ಆಶ್ಚರ್ಯಚಕಿತರಾಗುವಿರಲ್ಲವೇ? ಆನಂದದಿಂದಲೂ ಆಶ್ಚರ್ಯದಿಂದಲೂ ನೀವು ನಿಜವಾಗಿಯೂ ಕುತೂಹಲಭರಿತರಾಗುವಿರಿ!

ಹೆಚ್ಚಿನ ಮೆಚ್ಚಿಗೆ ಈ ರೀತಿಯ ಅನುಭವವು ನಿಮಗಾಗಲೀ ಇಲ್ಲವೇ ನನಗಾಗಲೀ ಎಂದೂ ಸಂಭವಿಸಲಿಕ್ಕಿಲ್ಲ. ಸಾಧ್ಯತೆಯು ಅತೀ ಕಡಿಮೆಯಾಗಿದೆ. ನೀವು ಮನೆಗೆ

ಹೋಗಿ ಯಾರಾದರೂ ನಿಮ್ಮ ಮನೆಯಲ್ಲಿ ಹೊಸದಾದ ವಸ್ತುಗಳನ್ನೂ ಬಟ್ಟೆಗಳನ್ನೂ ಕಂಡುಕೊಳ್ಳಲಾರಿರಿ. ಬೇರೆ ಯಾವುದಾದರೂ ಸಾಧ್ಯವಾಗಬಹುದು: ಅದು ಎಲ್ಲಾ ಹೊಸ ಸ್ವಾಸ್ತ್ಯಗಳಿಗಿಂತ ಎಷ್ಟೋ ಹೆಚ್ಚಿನದು ಸಾಧ್ಯವಿದೆ; ನೀನು ನೂತನ ವ್ಯಕ್ತಿಯಾಗಬಹುದು. ಇಂದು ದೇವರ ದೈವಿಕ ವಿಧಾನದ ಮುಖಾಂತರ ಪುನಃ ಮಾಡಲ್ಪಡಬಹುದು.

ಸಭೆಯು ದೇವರ ನೂತನ ಜೀವವನ್ನು ಹೊಂದಿದ ಜನರಿಂದ ಮಾಡಲ್ಪಟ್ಟಿದೆ. ಅವರು ನವ ಜೀವನ ಕುಟುಂಬವಾಗಿರುವರು. ಅದೇ ಸಮಯದಲ್ಲಿ ದೇವರು ನಿನ್ನನ್ನು ನೂತನ ವ್ಯಕ್ತಿಯನ್ನಾಗಿ ಮಾಡುವನು, ಆತನು ನಿನ್ನನ್ನು ತನ್ನ ಸಭೆಯಲ್ಲಿ ಇಡುವನು. ಇಂದು ದೇವರು ಪುನಃ ಮಾಡುವ ವಿಧಾನಕ್ಕೆ ಒಪ್ಪಿಸಿಕೊಳ್ಳುವದರಿಂದ ನೂತನ ಜೀವನದ ಸಮೂಹವನ್ನು ಯಾಕೆ ಪ್ರವೇಶಿಸಬಾರದು?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. *Neos* ಮತ್ತು *anios* ಎಂಬ ಗ್ರೀಕ ಪದಗಳ ಮಧ್ಯದಲ್ಲಿ ಭಿನ್ನತೆ ಯಾವುದು? ಈ ಭಿನ್ನತೆಯನ್ನು 2 ಕೊರಿಂಥ 5:17ಕ್ಕೆ ಅನ್ವಯಿಸಿರಿ.
2. ನಾವು ಕ್ರೈಸ್ತರಾಗುವ ಮೊದಲು ಯಾವ ಅರ್ಥದಲ್ಲಿ ನಾವು ಸತ್ತು ಹೋಗಿದ್ದೆವು?
3. ರೋಮಾಪುರ 1-8ರ ಸಂಕ್ಷಿಪ್ತ ಮುಖ್ಯಾಂಶಗಳನ್ನು ಕೊಡಿರಿ.
4. "ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?" (ರೋಮಾಪುರ 6:1) ಎಂಬ ಪ್ರಶ್ನೆಯಿಂದ ಪೌಲನ ಅರ್ಥ ಏನೆಂದು ಹೇಳಿರಿ.
5. ಯಾವಾಗ ಇಲ್ಲವೇ ಯಾವ ಹಂತದಲ್ಲಿ ಪಾಪಕ್ಕೆ ನಮ್ಮ ಮರಣವು ಅಂತಿಮಗೊಳಿಸಲ್ಪಟ್ಟಿತು?
6. ಮಾರ್ಪಡುವ ಗತಿಯಲ್ಲಿ ಪಾಪದಿಂದ ಬೇರ್ಪಡುವಿಕೆಯು ಹೇಗೆ ತರಲ್ಪಟ್ಟಿತು?
7. ಬೇರ್ಪಡಿಸುವ ಹಂತವು ಬಿಡಲ್ಪಟ್ಟರೆ, ಒಬ್ಬನ ಮಾರ್ಪಡುವಿಕೆಯ ಬಗ್ಗೆ ಯಾವುದು ಸತ್ಯವಾಗುವುದು?
8. ನಾವು ಹೇಗೆ ಕ್ರಿಸ್ತನೊಳಗೆ ತರಲ್ಪಟ್ಟೆವು?
9. ಗ್ರೀಕ ಪದ *baptizo*ದ ಅರ್ಥವೇನು?
10. ರೋಮಾಪುರ 6:4ರಲ್ಲಿ ನಾವು ಮರಣದೊಳಗೆ ಬಾಪ್ತಿಸ್ಮ ಹೊಂದಿದ್ದೇವೆ ಎಂದು ಪೌಲನು ಹೇಳಿದ್ದರಲ್ಲಿ ಅವನ ಅರ್ಥ ಏನಾಗಿತ್ತು?
11. ರೋಮಾಪುರ 6:1-4ರಲ್ಲಿ ಪೌಲನು ನಮೂದಿಸಿದ ಬಾಪ್ತಿಸ್ಮದ ನಾಲ್ಕು ವಿಶೇಷ ಲಕ್ಷಣಗಳನ್ನು ಯಾದಿ ಮಾಡಿರಿ.
12. ರೋಮಾಪುರ 6:7ರ ಪ್ರಕಾರ ಕ್ರಿಸ್ತನಲ್ಲಿ ಯಾವ ರೀತಿಯ ಸ್ವಾತಂತ್ರ್ಯವು ನಮಗೆ ಕೊಡಲ್ಪಟ್ಟಿದೆ?
13. "ದೇವರಿಗಾಗಿ ಜೀವಿಸಿರುವುದು" ಎಂಬುದನ್ನು ಉಲ್ಲೇಖಿಸಿದಾಗ ಪೌಲನ ಅರ್ಥವು ಏನಾಗಿತ್ತು?
14. ಕ್ರೈಸ್ತನು ಯಾವ ರೀತಿಯ ಫಲಗಳನ್ನು ತರುವನು?
15. ಕ್ರೈಸ್ತನಿಗೆ ಯಾವ ಭವಿಷ್ಯವು ಇರುವುದು? ಅದನ್ನು ವಿವರಿಸಿರಿ.

© 2009 Truth for Today